ಜುಜುಬಿಯಾಗಿ ಕಾಣುತ್ತಿತ್ತು. ಅಮೆರಿಕದ ಸಿಟಿಗಳು, ಕಾರುಬಾರು, ಬಂಗಲೆಗಳು, ಅಲ್ಲಿನ ಝಗಮಗಿಸುವ ದಿನಚರಿ ಅವನನ್ನು ಹಗಲು ರಾತ್ರಿ ಕಾಡತೊಡಗಿದ್ದವು.

ಇಂಜಿನಿಯರನ ಹೆಂಡತಿ ಕನ್ನಡದಲ್ಲಿ ಎಂ.ಎ ಮಾಡಿ ಯಾವುದೂ ಕೆಲಸವಿಲ್ಲದೆ ಮನೆಯಲ್ಲಿದ್ದಳು. ಅವಳು ಮದುವೆಯಾಗಿ ಕಿರಿಯಜ್ಜನ ಮನೆ ಸೇರುವಷ್ಟರಲ್ಲಿ ಮೈದುನನು ಅಮೆರಿಕಕ್ಕೆ ಹೋಗಿಯಾಗಿತ್ತು. ತಮ್ಮ ಮದುವೆಗೂ ಬಾರದಿದ್ದ ಮೈದುನನನ್ನು ಫೋನಿನಲ್ಲಿ ವಿಡಿಯೋ ಕರೆಗಳನ್ನು ಮಾಡಿದಾಗ ಮಾತ್ರವೇ ನೋಡಿದ್ದಳು ಮತ್ತು ಮಾತನಾಡಿದ್ದಳು. ಅದು ಬಿಟ್ಟರೆ ಅವರು ಒಮ್ಮೆಯೂ ಎದುರುಬದುರಾಗಿ ಒಬ್ಬರನ್ನೊಬ್ಬರು ನೋಡಿರಲಿಲ್ಲ. ಅಮೆರಿಕನ್ ಇಂಗ್ಲೀಷ್‌ನಲ್ಲಿ ಮಾತನಾಡುತ್ತಿದ್ದ ಮೈದುನನ ಭಾಷೆಯೇ ಆಕೆಗೆ ಅರ್ಥವಾಗುತ್ತಿರಲಿಲ್ಲ. 'ನೀವು ಕನ್ನಡದ ಬದಲು ಇಂಗ್ಲಿಷ್‌ನಲ್ಲಿ ಎಂ.ಎ ಮಾಡಿದ್ದರೆ wide scope ಇರುತ್ತಿತ್ತು. Global levelನಲ್ಲಿ ನೀವು shine ಆಗಬೇಕೆಂದರೆ ಕನ್ನಡ won't work.. ಇಂಗ್ಲಿಷನ್ನು ನೀವು ಹೀಗೆ ಮಾತನಾಡಿದರೆ ಯಾರಿಗೂ ಅರ್ಥವಾಗಲ್ಲ. You should change your accent ಎಂದು ಜೋರಾಗಿ ನಕ್ಕಿದ್ದ.

ಇದರಿಂದ ಅವಮಾನಿತಳಾದ ಆಕೆ ತನ್ನ ಕನ್ನಡ ಎಂ.ಎ ಪದವಿಯನ್ನು ಹಳಿದುಕೊಳ್ಳುತ್ತ ಓದಿನಲ್ಲಿದ್ದ ಆಸಕ್ತಿಯನ್ನು ಕಳೆದುಕೊಂಡಿದ್ದಳು. ತನ್ನ ಇಂಜಿನಿಯರ್ ಗಂಡ ಈಗಾಗಲೇ ಕಾಣುತ್ತಿದ್ದ ಅಮೆರಿಕ ಕನಸುಗಳನ್ನು ತಾನೂ ಕಾಣುತ್ತ ರೋಮಾಂಚನಗೊಳ್ಳತೊಡಗಿದಳು. ತಮ್ಮ ಅಮೆರಿಕ ಯೋಜನೆಗೆ ಕಿರಿಕ್ ಆಗಬಾರದೆಂದು ಅವರು ಮಕ್ಕಳನ್ನು ಸಹ ಮಾಡಿಕೊಂಡಿರಲಿಲ್ಲ.

ಇನ್ನು ಅಮೆರಿಕ ಮಗನ ತಂದೆ ತಾಯಿಯರು ಅಂದರೆ ಕಿರಿಯಜ್ಜ ಅಜ್ಜಿಯರು ಹೊಸ ಚೈತನ್ಯದಿಂದ ಕಂಗೊಳಿಸತೊಡಗಿದರು. ಮಗ ಅಮೆರಿಕದಿಂದ ಮನೆಗೆ ಬರುತ್ತಿರುವ ವಿಷಯ ಅದಾವ ಮಾಯೆಯಿಂದಲೋ ನೆಂಟರಿಷ್ಟರಿಗೆ ತಿಳಿದು ಹೋಗಿತ್ತು. ಅನೇಕ ಶ್ರೀಮಂತರು ನೆಂಟಸ್ತನ ಬೆಳೆಸಲು ದುಂಬಾಲು ಬಿದ್ದಿದ್ದರು. ಹತ್ತಾರು ಕಡೆಯವರು ಹುಡುಗನ ಫೋಟೊ, ಬಯೋಡೇಟಾ ಮತ್ತು ಜನ್ಮಕುಂಡಲಿಯನ್ನು ಕೇಳಿ ಪಡೆದುಕೊಂಡಿದ್ದರು. ಅಮೆರಿಕದಿಂದ ಇಷ್ಟು ವರ್ಷವಾದರೂ ಬರದೇ ಇದ್ದುದರಿಂದ ಆಸಕ್ತಿಯನ್ನು ಕಳೆದುಕೊಂಡಿದ್ದವರು ಈಗ ಎಚ್ಚರದಿಂದ ನಡೆದುಕೊಳ್ಳತೊಡಗಿದರು. ಅದರಲ್ಲಿ ಅನೇಕರು ನೂರಾರು ಕೋಟಿಗಳ ಒಡೆಯರಿದ್ದರು. ಒಬ್ಬನಂತೂ ಪ್ರಸ್ತುತ ಸರ್ಕಾರದಲ್ಲಿ ಮಂತ್ರಿಯೇ ಆಗಿದ್ದ. ಅತ್ತೆ, ಮಾವ, ನಾದಿನಿ ಮುಂತಾದವರ ಕಾಟವೇ ಇಲ್ಲದೆ ಅಮೆರಿಕ ಎಂಬ ಭೂಲೋಕದ ಸ್ವರ್ಗದಲ್ಲಿರುವ ಆಸೆಪಟ್ಟು ಇದೇ ಹುಡುಗನನ್ನು ಮದುವೆಯಾಗಲು ಮಂತ್ರಿಯ ಮಗಳು ಪಣ ತೊಟ್ಟು ಕಾಯತೊಡಗಿದಳು. ತನ್ನ ತಂದೆಯ ಮೇಲೆ ಪ್ರಚಂಡ ಒತ್ತಡ ಹಾಕಿದ್ದಳು. ಮಂತ್ರಿಯು ತನ್ನೆಲ್ಲ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಕಿರಿಯಜ್ಜನಿಗೆ ಫೋನ್ ಮಾಡುವುದು, ಆಗಾಗ ಅವರ ಮನೆಗೆ ಭೇಟಿ ಕೊಡುವುದು, ತನ್ನ ಜನರನ್ನು ಕಳುಹಿಸಿ ಭವ್ಯ ವರೋಪಚಾರದ ವಿವರಗಳನ್ನು ತಿಳಿಸುವುದು ಮಾಡತೊಡಗಿದನು. ವರನಿಗಷ್ಟೇ ಅಲ್ಲ ಮನೆಯ ಇತರರಿಗೂ ಕೊಡುವ ಹಣ, ಆಸ್ತಿಗಳ ಪಟ್ಟಿಯನ್ನೇ ಬಿತ್ತರಿಸತೊಡಗಿದ. ಮಂತ್ರಿಯ ಜಾತಿ ಉಪಜಾತಿಯಲ್ಲಿ ಈ ಮಟ್ಟದ ಪ್ರತಿಷ್ಠೆ, ಅಮೆರಿಕದ ಸ್ಥಾನಮಾನ ಇದ್ದವರು ಯಾರೂ ಇರಲಿಲ್ಲ. ಈ ಎಲ್ಲ ಸನ್ನಿವೇಶಗಳು ಮಂತ್ರಿಯನ್ನು ಕಿರಿಯಜ್ಜನ ಬೆನ್ನು ಹತ್ತುವಂತೆ ಮಾಡಿದ್ದವು.

ಕಿರಿಯಜ್ಜ ಅಜ್ಜಿಯರು ಇದುವರೆಗೆ ತನ್ನ ಮಗನಿಗೆ ಒಳ್ಳೆಯ ಕಡೆ ಹೆಣ್ಣು ತಂದುಕೊಂಡು ಸುಖೀ ಕುಟುಂಬವನ್ನು ಮಾಡಿದರೆ ಸಾಕೆಂಬ ಆಸೆಯಿಂದಿದ್ದರು. ಆದರೆ, ಅದು ನಾಪತ್ತೆಯಾಗಿ ಆಡಂಬರದ ಹಾಗೂ ಆಗರ್ಭ ಶ್ರೀಮಂತರ ನೆಂಟಸ್ತನವೇ ಆದರ್ಶವಾಗಿಯೂ, ಕೈಗೆಟಕುವಂತೆಯೂ ಕಾಣತೊಡಗಿತು. ಇಂಜಿನಿಯರ್ ಮತ್ತು ಲೆಕ್ಚರರ್ ಇಬ್ಬರೂ ಈಗಾಗಲೇ ಮಂತ್ರಿ ಮಹಾಶಯನಿಗೆ ತಮ್ಮ ತಮ್ಮ ಅಳಲು ತೋಡಿಕೊಂಡಿದ್ದರು. ಮಂತ್ರಿಮಹಾಶಯ ಅವರಿಗೂ ಆಶ್ವಾಸನೆ ಕೊಟ್ಟಿದ್ದ. ಅಮೆರಿಕದಿಂದ ಮನೆ ಮಗ ಬರುವ ದಿನ ಹತ್ತಿರವಾಗತೊಡಗಿತು. ಎಲ್ಲರಲ್ಲೂ ಕಾತುರ, ಸಂಭ್ರಮಗಳು ತುಂಬಿದ್ದವು. ಒಬ್ಬೊಬ್ಬರದೂ ಒಂದೊಂದು ಲೆಕ್ಕಾಚಾರ. ಮನೆಯ ಹಿರಿಯ ಸೊಸೆಯಾಗಿದ್ದ ಲೆಕ್ಚರರ್ ಹೆಂಡತಿ ತನ್ನ ಗಂಡನಂತೆಯೇ ಅಮೆರಿಕದ ಕನಸು ಕಾಣುತ್ತಾ, ಸ್ನೇಹಿತೆಯರೆಲ್ಲರಿಗೂ ಆ ಕನಸುಗಳನ್ನು ಬಿತ್ತುತ್ತಾ ಅಡುಗೆ ಮನೆಯ ಸಕಲ ಕಾರ್ಯಭಾರವನ್ನು ಕೆಲಸದವರಿಗೆ ವಹಿಸಿ ತನ್ನ